ಅ) ಹೌದು ಖಾಲಿಯಿರುವ ವಿವಿಧ ವರ್ಗಗಳ ಒಟ್ಟು ಹುದ್ದೆಗಳ ಸಂಖ್ಯೆ 467.

ಆ) ಹೌದು.

ಇ) ಸರ್ಕಾರವು ಈ ನೇರ ನೇಮಕಾತಿಯನ್ನು ನಿಲ್ಲಿಸಬೇಕೆಂದು ಮಂಡಳಿಗೆ ಸೂಚನೆ ನೀಡಿದೆ. ಈ ಮಧ್ಯೆ ಮಂಡಳಿಯ ಕೋರಿಕೆಯಂತೆ ಈ ನಿರ್ಬಂಧವನ್ನು ಸಡಿಲಿಸುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಸಹಕಾರಿ ಸಂಘಗಳಿಗೆ ಸರ್ಕಾರದಿಂದ ಬರಬೇಕಾದ ಬಾಕಿ ಹಣದ ಬಗ್ಗೆ.

2676 - ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಡಿತರ ಸಗಟು ವ್ಯಾಪಾರದಲ್ಲಿ ಕೇಂದ್ರ ಸರ್ಕಾರದ ಸಕ್ಕರೆ ನೀತಿಯಿಂದಾಗಿ ಇಡೀ ರಾಜ್ಯದ ಸಹಕಾರಿ ಸಂಘಗಳಿಗೆ ರಾಜ್ಯ ಸರ್ಕಾರದಿಂದ ಬರಬೇಕಾದ ಹಣವೆಷ್ಟು?

ಆ) ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರ ಸಂಘಗಳಿಗೆ ಬರಬೇಕಾದ ಹಣವೆಷ್ಟು?

ಇ) ಹಾಗೂ ಸರ್ಕಾರ ಬಾಕಿ ಹಣವನ್ನು ಎಂದು ಪಾವತಿ ಮಾಡುವುದು?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ರೂ. 403.15 ಲಕ್ಷ ರೂಪಾಯಿಗಳು

ಆ) ರೂ. 64.86 ಲಕ್ಷ ರೂಪಾಯಿಗಳು

ಇ) ಆದಷ್ಟು ಜಾಗ್ರತವಾಗಿ ಬಾಕಿ ಹಣವನ್ನು ಪಾವತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆಯನ್ನು ಹೋಗಲಾಡಿಸುವ ಬಗ್ಗೆ

2804 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡದಲ್ಲಿ ಶಿಕ್ಷಕರ ಕೊರತೆ ಇರುವ ಪ್ರಾಥಮಿಕ, ಮಾಧ್ಯಮಿಕ ಪ್ರೌಢ ಶಾಲೆಗಳೆಷ್ಟು (ಅವುಗಳ ವಿವರ ಬೇಕು)?

ಆ) ಶಿಕ್ಷಕರ ಕೊರತೆ ಇರುವ ಈ ಶಾಲೆಗಳಿಗೆ ಶಿಕ್ಷಕರನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಈ ಶಿಕ್ಷಕರ ಕೊರತೆಯು ಯಾವಾಗ ಇಲ್ಲವಾಗಿ ಪರಿಪೂರ್ಣತೆಗೆ ಬರುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ 661 ಶಿಕ್ಷಕರ ಕೊರತೆ ಇರುತ್ತದೆ. (ಮಕ್ಕಳು ಉಪಾಧ್ಯಾಯರ 1:50ರ ಅನುಪಾತದಂತೆ) ಸರ್ಕಾರಿ ಪ್ರೌಢ ಶಾಲೆಗಳಲ್ಲಿ 97 ಶಿಕ್ಷಕರ ಕೊರತೆ ಇದೆ. ಶಾಲೆಗಳ ವಿವರಗಳನ್ನು ಪಡೆದು ಒದಗಿಸಲಾಗುವುದು.